

ವಿಗ್ರಹವನ್ನು ಬ್ರಾಹ್ಮಣ ಕುಟುಂಬಗಳ ದೇವಸ್ಥಾನಕ್ಕೆ ಹಿಂತಿರುಗಿಸಲಾಗುತ್ತದೆ. ನಂತರ ಗುಡಿಸಲನ್ನು ಸುಡಲಾಗುತ್ತದೆ.

ಈ ಹಬ್ಬದಂದು ಮಕ್ಕಳು ಸಾಂಪ್ರದಾಯಿಕ ಉಡುಪನ್ನು ಧರಿಸಿ ಹತ್ತಿರದ ಮನೆಗಳಿಗೆ ಭೇಟಿ ನೀಡಿ ದೇಣಿಗೆ ಸಂಗ್ರಹಿಸುತ್ತಾರೆ. ಆಚರಣೆಯ ಈ ಭಾಗವನ್ನು 'ನಕಾಥೆಂಗ್' ಎಂದು ಕರೆಯಲಾಗುತ್ತದೆ. ತಾವು ಪಡೆಯುವ ಸ್ವಲ್ಪ ದೇಣಿಗೆಯಿಂದ, ಮಕ್ಕಳು ಸಿಹಿತಿಂಡಿಗಳು ಅಥವಾ ಮಿಠಾಯಿಗಳನ್ನು ಖರೀದಿಸಿ ಪರಸ್ಪರ ಹಂಚಿಕೊಂಡು ಸಂತೋಷಪಡುತ್ತಾರೆ.

ಈ ಹಬ್ಬದ ಪ್ರಮುಖ ಆಕರ್ಷಣೆಯೆಂದರೆ 'ಥಬಲ್ ಚೊಂಗ್ಬಾ'. ಇದು ಮಣಿಪುರದ ಸಾಂಪ್ರದಾಯಿಕ ಜನಪದ ನೃತ್ಯವಾಗಿದ್ದು, ಇದರಲ್ಲಿ ಹುಡುಗರು ಮತ್ತು ಹುಡುಗಿಯರು ಒಟ್ಟಾಗಿ ಕೈ ಹಿಡಿದು ಹಾಡುತ್ತಾ, ವೃತ್ತಾಕಾರದಲ್ಲಿ ನೃತ್ಯ ಮಾಡುತ್ತಾರೆ. ಥಬಲ್ಚೊಂಗ್ಬಾದ ಎಂದರೆ 'ಚಂದ್ರನ ನೃತ್ಯ' ಎಂದರ್ಥ. ಹಾಗಾಗಿ ಇದನ್ನು ರಾತ್ರಿಯ ಸಮಯದಲ್ಲಿ ಪ್ರದರ್ಶಿಸಲಾಗುತ್ತದೆ. ಇದು ಸಾಮಾನ್ಯವಾಗಿ ಹಬ್ಬದ ಎರಡನೇ ದಿನದಂದು ನಡೆಯುತ್ತದೆ. ಕೆಲವು ಸಂದರ್ಭಗಳಲ್ಲಿ ಹಬ್ಬದ ಇತರ ದಿನಗಳಲ್ಲಿಯೂ ಸಹ ನಡೆಯಬಹುದು. ವಿವಾಹಿತ ಮಹಿಳೆಯರು ಯೋಶಾಂಗ್ ಸಮಯದಲ್ಲಿ 'ಥಬಲ್ ಚೊಂಗ್ಬಾ' ಕಾರ್ಯಕ್ರಮವನ್ನು ಸಹ ಆಯೋಜಿಸುತ್ತಾರೆ. ಇದನ್ನು 'ಮೌಥಬಲ್' ಎಂದು ಕರೆಯಲಾಗುತ್ತದೆ.

ವೈಷ್ಣವ ಸಮುದಾಯದ ಹಿರಿಯರು ಮತ್ತು ಇತರ ಸ್ಥಳೀಯ ಸಂಕೀರ್ತನಾ ಬ್ಯಾಂಡ್‌ಗಳು ಸಾಂಪ್ರದಾಯಿಕ 'ಪಾಲ ಏಷೈ' (ಭಕ್ತಿಗೀತೆಗಳು) ಪ್ರದರ್ಶಿಸುತ್ತಾರೆ. ಇದನ್ನು 'ಹೋಳಿ ಪಾಪಾಲ ಏಷೈಷಕ್ಪ' ಎಂದೂ ಕರೆಯುತ್ತಾರೆ. ಅವರು ಗೋವಿಂದಜೀ ದೇವಸ್ಥಾನ, ಬಿಜೋಯ್ ಗೋವಿಂದಜೀ ದೇವಸ್ಥಾನ ಮತ್ತು ಮನೆಯಿಂದ ಮನೆಗೆ ಸೇರಿದಂತೆ ವಿವಿಧ ಪೂಜಾ ಸ್ಥಳಗಳಲ್ಲಿ ಇದನ್ನು ಪ್ರದರ್ಶಿಸುತ್ತಾರೆ. ಅವರು ಪ್ರದರ್ಶನ ನೀಡುವಾಗ ಅವರಿಗೆ ನೀಡುವ ಹಣವನ್ನು ದೇಣಿಗೆ ರೂಪದಲ್ಲಿ ಸಂಗ್ರಹಿಸುತ್ತಾರೆ.

ಹೋಳಿ ಹಬ್ಬದಲ್ಲಿ ಇತರೆಡೆ ಆಚರಿಸುವಂತೆ ಇಲ್ಲೂ ಸಹ ಜನರು ಪರಸ್ಪರ ಬಣ್ಣಗಳನ್ನು ಹಚ್ಚಿಕೊಂಡು (ಅಬೀರ್ಟೀನಾಬಾ), ಮಕ್ಕಳು ನೀರಿನ ಬಂದೂಕುಗಳಿಂದ (ಪಿಚ್ಕಾರಿ) ತಮ್ಮೊಳಗೆ ಬಣ್ಣದ ನೀರನ್ನು ಎರಚುತ್ತಾ ಸಂಭ್ರಮಿಸುತ್ತಾರೆ. ಯಾವೋಶಾಂಗ್‌ನ ಎರಡನೇ ದಿನವನ್ನು 'ಪಿಚ್ಕರಿನುಮಿತ್' (ಪಿಚ್ಕಾರಿ ದಿನ) ಎಂದೂ ಕರೆಯಲಾಗುತ್ತದೆ. ಬಣ್ಣಗಳೊಂದಿಗೆ ಆಟವಾಡುವ ಈ ಸಂತೋಷ ಮತ್ತು ಉತ್ಸಾಹವು ಹಬ್ಬದ ಐದನೇ ಅಥವಾ ಕೊನೆಯ ದಿನದವರೆಗೆ ನಡೆಯುತ್ತಲೇ ಇರುತ್ತದೆ. ಇದರೊಂದಿಗೆ ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಸಾಗಿ ದೇವರಿಗೆ ಪ್ರಾರ್ಥನೆ ಸಲ್ಲಿಸುವುದನ್ನು ಕಾಣಬಹುದು.

ಯಾವೋಶಾಂಗ್‌ನ ಹಬ್ಬ ಇತರ ಭಾಗದ ಹೋಳಿ ಹಬ್ಬಕ್ಕಿಂತ ಭಿನ್ನವಾಗಿರಲು ಮತ್ತೊಂದು ಮಹತ್ವದ ಕಾರಣವೆಂದರೆ ಇದೊಂದು ಕ್ರೀಡಾ ಹಬ್ಬವೂ ಆಗಿದೆ. ಹೆಚ್ಚಿನ ಸ್ಥಳೀಯ ಸಮುದಾಯಗಳು ಮತ್ತು ಕ್ಲಬ್‌ಗಳು ಯಾವೋಶಾಂಗ್‌ನ ಐದು ದಿನಗಳಲ್ಲಿ ತಮ್ಮ ಸ್ಥಳೀಯ ಮೈದಾನಗಳಲ್ಲಿ ಮತ್ತು ರಸ್ತೆ ಬದಿಗಳಲ್ಲಿಯೂ ಸಹ ಕ್ರೀಡೆಗಳನ್ನು ಆಯೋಜಿಸುತ್ತವೆ. ಯಾವೋಶಾಂಗ್ ಕ್ರೀಡೆಗಳ ಹಿಂದಿನ ಪ್ರಾಥಮಿಕ ಉದ್ದೇಶವೆಂದರೆ, ಶಕ್ತಿಯುತ ಯುವಕರನ್ನು ಮಾದಕ ದ್ರವ್ಯ ಮತ್ತು ಮದ್ಯದ ಕಡೆಗೆ ಒಲವು ತೋರದಂತೆ ತಡೆಯುವುದು. ಮತ್ತು ದೇಶದಲ್ಲಿ ಕ್ರೀಡೆಗಳ ಶಕ್ತಿ ಕೇಂದ್ರವೆಂದು ಈಗಾಗಲೇ ಕರೆಯಲಾಗುವ ರಾಜ್ಯದಲ್ಲಿ ಕ್ರೀಡೆ ಮತ್ತು ಆಟಗಳ ಕಡೆಗೆ ಪ್ರೋತ್ಸಾಹಿಸುವುದು. ಈ ಮೂಲಕ ಯುವಕರು ಮತ್ತು ಮಕ್ಕಳಿಗೆ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ನೀಡಲಾಗುತ್ತದೆ. ಯಾವೋಶಾಂಗ್ ಕ್ರೀಡೆಗಳಲ್ಲಿ 'ಮುಕ್ನಾ' (ಸಾಂಪ್ರದಾಯಿಕ ಕುಸ್ತಿ) ಮತ್ತು 'ಲಪುಕಬೀ' ಮುಂತಾದ ಸ್ಥಳೀಯ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಆಟಗಳು ಅತ್ಯಂತ ಜನಪ್ರಿಯವಾಗಿವೆ.

ಕ್ರೀಡಾಕೂಟಗಳಲ್ಲದೇ ಚರ್ಚಾ ಸ್ಪರ್ಧೆಗಳು, ಭಾಷಣ, ಗೀತೆ ಸ್ಪರ್ಧೆಗಳು, ಅಂಕಗಣಿತ ಸ್ಪರ್ಧೆಗಳು, ಕವನ ವಾಚನಗಳು ಮುಂತಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಸಹ ಉದಯೋನ್ಮುಖ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಯೋಜಿಸಲಾಗುತ್ತದೆ. ಚಮಚ ಓಟ, ಹಗ್ಗ ಜಗ್ಗಾಟ, ಪ್ರತಿಮೆ ನೃತ್ಯ, ಫುಟ್ಬಾಲ್ ಪಂದ್ಯ, ಪೂನ್ ಪುಬಿ, ಚಾಫುತುಗೈಬಿ (ಕುರುಡು ಹೊಡೆತ) ಮುಂತಾದ ಕಾರ್ಯಕ್ರಮಗಳನ್ನು ಮಕ್ಕಳು, ಹದಿಹರೆಯದವರು, ವಿವಾಹಿತ ಮಹಿಳೆಯರು ಇತ್ಯಾದಿಗಳಿಗಾಗಿ ಆಯೋಜಿಸಲಾಗುತ್ತದೆ.

ಯಾವೋಶಾಂಗ್ ಕ್ರೀಡೆಗಳಲ್ಲಿ ವಿಶೇಷವಾಗಿ ವಿವಾಹಿತ ಮಹಿಳೆಯರು ಹೆಚ್ಚು ಭಾಗವಹಿಸುವುದನ್ನು ಕಾಣಬಹುದು. ಇದು ಅವರಿಗೆ ಸಾಮಾಜಿಕವಾಗಿ ಬೆರೆಯಲು ಒಂದು ಮಾಧ್ಯಮದಂತೆ ಕಾರ್ಯನಿರ್ವಹಿಸುತ್ತದೆ. ಕ್ರೀಡಾ ಚಟುವಟಿಕೆಗಳಲ್ಲದೆ, ಜನರು ಒಟ್ಟಿಗೆ ಸೇರಿ ಆನಂದಿಸಲು ವಿವಿಧ ಪ್ರದೇಶಗಳಲ್ಲಿ ಸಾಂಪ್ರದಾಯಿಕ ರಂಗಭೂಮಿ ನಾಟಕವಾದ 'ಶುಮಂಗ್ ಲೀಲಾ'ದಂತಹ ಇತರ ಚಟುವಟಿಕೆಗಳನ್ನು ಸಹ ಆಯೋಜಿಸಲಾಗುತ್ತದೆ.





ಮಣಿಪುರ ಪ್ರವಾಸಿ ತಾಣ

ಯಾವೋಶಾಂಗ್‌ನ ಮೂರನೇ ದಿನ 'ಮೌ ಮತ್ತು ಲೀಶಾಬಿ ಚಕ್ಷನಾಬಾ' ಎಂಬ ಖಾದ್ಯ ತಯಾರಿಸುವ ಆಚರಣೆಯು ಗಮನ ಸೆಳೆಯುತ್ತದೆ. ಸ್ಥಳೀಯ ವಿವಾಹಿತ ಮಹಿಳೆಯರು ಮತ್ತು ಯುವತಿಯರು ತಮ್ಮ ಪಾಲಿನ ದೇಣಿಗೆ ನೀಡಿ ಹಬ್ಬವನ್ನು ಆಯೋಜಿಸುತ್ತಾರೆ. ಇದರಲ್ಲಿ ಸ್ಥಳೀಯ ಆಹಾರವನ್ನು ತಯಾರಿಸುವುದು ಮತ್ತು ಅವುಗಳನ್ನು ಪರಸ್ಪರ ಹಂಚಿಕೊಳ್ಳುವುದು ಆಚರಣೆಯ ಭಾಗವಾಗಿರುತ್ತದೆ. ಸ್ಥಳೀಯ ಎಲ್ಲಾ ಮಹಿಳೆಯರು ಒಂದೆಡೆ ಸೇರಿ ಪರಸ್ಪರ ಬೆರೆತು ಸುಖ ದುಃಖಗಳನ್ನು ಹಂಚಿಕೊಳ್ಳುವುದನ್ನು ಕಾಣಬಹುದು.

ಐದು ದಿನಗಳ ಯಾವೋಶಾಂಗ್ ಹಬ್ಬವನ್ನು ಕುಟುಂಬ ಸಮೇತರಾಗಿ ಸವಿಯಲು ಖಾಸಗಿ ಕಚೇರಿಗಳು ಮತ್ತು ಸರ್ಕಾರಿ ಇಲಾಖೆಗಳಿಗೆ ರಜೆ ನೀಡಲಾಗುತ್ತದೆ. ಯಾವೋಶಾಂಗ್ ಹಬ್ಬ ವಸಂತ ಋತುವಿನ ಆಗಮನವನ್ನು ಸೂಚಿಸುವುದರಿಂದ ಮಣಿಪುರದಲ್ಲಿ ಇದು ವರ್ಷದ ಅತ್ಯುತ್ತಮ ಸಮಯಗಳಲ್ಲಿ ಒಂದಾಗಿದೆ. ಪ್ರಕೃತಿಯ ಸುಂದರ ಸೊಬಗು, ಸೂರ್ಯನ ಹದವಾದ ಬಿಸಿಲು, ತುಂತುರು ಮಳೆ, ಸಣ್ಣಗೆ ಬೀಸುವ ಗಾಳಿ, ಹಸಿರಿನಿಂದ ತುಂಬಿಕೊಂಡ ಮರದ ಕೊಂಬೆಗಳು, ಬಣ್ಣ ಬಣ್ಣದ ಹೂವುಗಳು, ಪಕ್ಷಿಗಳ ಚಿಲಿಪಿಲಿ ಸದ್ದು ಎಲ್ಲವೂ ಹಬ್ಬಕ್ಕೆ ವಿಶೇಷ ಮೆರುಗನ್ನು ನೀಡುತ್ತದೆ.